For more job news visit : www.kpscvaani.com

ಕರ್ನಾಟಕ ಲೋಕ ಸೇವಾ ಆಯೋಗ

ಕಡತ ಸಂಖ್ಯೆ:ಪಿಎಸ್ ಸಿ 171 ಆರ್ ಟಿ ಬಿ-4/2023-24/331 ದಿನಾಂಕ:22-09-2026

ಅಧಿಸೂಚನೆ

ಉಲ್ಲೇಖ: 1. ಆಯೋಗದ ಅಧಿಸೂಚನೆ ಸಂಖ್ಯೆ ಪಿಎಸ್ ಸಿ 171 ಆರ್ ಟಿಬಿ(4) /2023-24
ದಿನಾಂಕ:06-09-2023.ಮತ್ತು ತಿದ್ದುಪಡಿ ಅಧಿಸೂಚನೆ, ದಿ;08-10-2024
2. ಆಯೋಗದ ಸಭೆಯ ನಡವಳಿಗಳ ದಿನಾಂಕ:25-08-2026

*****

ಆಯೋಗದ ಅಧಿಸೂಚನೆ ಸಂಖ್ಯೆ ಪಿಎಸ್ ಸಿ 171 ಆರ್ ಟಿಬಿ(4) /2023-24/ ದಿನಾಂಕ: 06-09-2023 ರಂದು ಅಧಿಸೂಚಿಸಲಾದ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಲ್ಲಿನ ಸಹಾಯಕ ಉದ್ಯೋಗಾಧಿಕಾರಿ 01 (ಕಲ್ಯಾಣ ಕರ್ನಾಟಕ ವೃಂದದ) ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024, ದಿನಾಂಕ:10-09-2024 ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ವಿವಿಧ ಇಲಾಖೆಗಳ ಗ್ರೂಪ್-ಸಿ ಮತ್ತು ಬಿ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈಗಾಗಲೇ ಹೊರಡಿಸಲಾಗಿರುವ ಅಧಿಸೂಚನೆಗಳಿಗೆ ಹಾಗೂ ಮುಂದಿನ ಒಂದು ವರ್ಷದಲ್ಲಿ ಹೊರಡಿಸಲಿರುವ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ, ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ 03 ವರ್ಷಗಳ ಸಡಿಲಿಕೆ ನೀಡಿ ಆದೇಶಿಸಿದ ಹಿನ್ನೆಲೆಯಲ್ಲಿ ದಿನಾಂಕ:08.10.2024 ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ.

ಕೈಗಾರಿಕಾ ಮತ್ತು ಉದ್ಯೋಗ ಇಲಾಖೆಯ ಸಹಾಯಕ ಉದ್ಯೋಗಾಧಿಕಾರಿ ಹೈ.ಕ ವೃಂದದ 01 ಹುದ್ದೆಯ ನೇಮಕಾತಿಗೆ ಸಂಬಂಧಿಸಿದ, ವಿವರಗಳು ಕೆಳಕಂಡಂತಿದೆ.

ಹುದ್ದೆಯ ಹೆಸರು ಮತ್ತು ಸಂಖ್ಯೆ	ಮೂಲ ಅಧಿಸೂಚನೆ ದಿನಾಂಕ	ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	ಸೇರ್ಪಡೆ/ ತಿದ್ದುಪಡಿ ಅಧಿಸೂಚನೆ ದಿನಾಂಕ	ಅರ್ಜಿ ಸಲ್ಲಿಸಲು ನಿಗದಿ ಪಡಿಸಲಾದ ಪ್ರಾರಂಭಿಕ ದಿನಾಂಕ ಹಾಗೂ ಕೊನೆಯ ದಿನಾಂಕ	ಸ್ವೀಕೃತವಾದ ಅರ್ಜಿಗಳು
ಕೈಗಾರಿಕಾ ಮತ್ತು ಉದ್ಯೋಗ ಇಲಾಖೆಯಲ್ಲಿನ ಸಹಾಯಕ ಉದ್ಯೋಗಾಧಿಕಾರಿ ಹೈದ್ರಾಬಾದ್- ಕರ್ನಾಟಕ ವೃಂದ-01	ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 171 ಆರ್ ಟಿಬಿ-4/2023-24 ದಿ:06.09.2023	07-10-2023	ಸಂಖ್ಯೆ: ಪಿಎಸ್ ಸಿ 171 ಆರ್ ಟಿಬಿ(4)/2023-24/ 2098 ದಿನಾಂಕ:08-10-2024	14-10-2024 ರಿಂದ 29-10-2024	6802

..2

For more job news visit : www.kpscvaani.com

ಸದರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು CBRT ಮಾದರಿಯಲ್ಲಿ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ MOCK CBRT ಪರೀಕ್ಷೆಯನ್ನು ನಡೆಸಿದ ಸಂಸ್ಥೆಯು ಬ್ಲಾಕ್ ಲಿಸ್ಟ್ ಆಗಿದ್ದರಿಂದ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿರುವುದಿಲ್ಲ.

ಪ್ರಸ್ತುತ ಆಯೋಗದಲ್ಲಿ ಗ್ರೂಪ್-ಎ ಮತ್ತು ಬಿ ವೃಂದದ ಹುದ್ದೆಗಳಿಗೆ ಮಾತ್ರ ಅಧಿಸೂಚನೆಯನ್ನು ಹೊರಡಿಸುತ್ತಿರುವುದರಿಂದ ಆಯೋಗದ ದಿನಾಂಕ:25-08-2026ರ ಸಭೆಯಲ್ಲಿ ಗ್ರೂಪ್ ಸಿ ಹುದ್ದೆಯಾದ ಸಹಾಯಕ ಉದ್ಯೋಗಾಧಿಕಾರಿ 01 (ಕಲ್ಯಾಣ ಕರ್ನಾಟಕ ವೃಂದದ) ಹುದ್ದೆಯ ಅಧಿಸೂಚನೆಯನ್ನು ರದ್ದುಪಡಿಸಲು ಮತ್ತು ಆ ಬಗ್ಗೆ ಇಲಾಖೆಗೆ ಮಾಹಿತಿ ನೀಡಲು ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ

ಆಯೋಗದ ನಿರ್ಣಯದಂತೆ ಅಧಿಸೂಚನೆ ಸಂಖ್ಯೆ ಪಿ ಎಸ್ ಸಿ 171 ಆರ್ ಟಿಬಿ(4)/2023-24, ದಿನಾಂಕ:06-09-2023 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ:08-10-2024 ರನ್ವಯ ಹೈದರಾಬಾದ್-ಕರ್ನಾಟಕ ವೃಂದದಡಿ ಅಧಿಸೂಚಿಸಲಾಗಿದ್ದ ಸಹಾಯಕ ಉದ್ಯೋಗಾಧಿಕಾರಿ -01 ಹುದ್ದೆಯ ಅಧಿಸೂಚನೆಯನ್ನು ಈ ಮೂಲಕ ರದ್ದುಪಡಿಸಲಾಗಿದೆ.

ಆಯೋಗದ ಆದೇಶದ ಮೇರೆಗೆ

K. Jyothi 21/9/2026

(ಜ್ಯೋತಿ.ಕೆ)

ಕಾರ್ಯದರ್ಶಿ

ಕರ್ನಾಟಕ ಲೋಕ ಸೇವಾ ಆಯೋಗ